ಎ.ಬಿ. ಇಬ್ರಾಹಿಂ, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

A.B. IBRAHIM, I.A.S.,
Secretary to Government
Animal Husbandry and
Fisheries Department

ಸಂಖ್ಯೆ: ಪಸಂಮೀ 49 ಕಹಾಮ 2018

ದಿನಾಂಕ:02.04.2020

## ಸುತ್ತೋಲೆ

ವಿಷಯ: ಕರೋನಾ ವೈರಸ್(ಕೋವಿಡ್–19) ಲಾಕ್‌ಡೌನ್ ಅವಧಿಯಲ್ಲಿ ಕೋಳಿ, ಕುರಿ, ಮೇಕೆ, ಮೊಟ್ಟೆ, ಮೀನು ಉತ್ಪಾದನೆ, ಸಾಗಾಣಿಕೆ ಮತ್ತು ಮಾರಾಟಕ್ಕೆ ನಿರ್ಬಂಧ ತೆರವುಗೊಳಿಸುವುದರ ಕುರಿತು.

–0–

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪಶುಸಂಗೋಪನಾ ಕಾರ್ಯಗಳಿಗೆ ಪೂರಕವಾಗಿ ಕೋಳಿಮೊಟ್ಟೆ, ಕೋಳಿಮಾಂಸ, ಮಾಂಸ, ಮೀನು, ಹಾಲು, ದ್ರವಸಾರಜನಕ ಹಾಗೂ ವೀರ್ಯನಳಿಕೆಗಳನ್ನು ಅಗತ್ಯ ವಸ್ತುಗಳೆಂದು ಮತ್ತು ಪಶುವೈದ್ಯಕೀಯ ಸೇವೆಗಳು, ಜಾನುವಾರು ಕ್ಷೇತ್ರಗಳು, ದ್ರವಸಾರಜನಕ ಮತ್ತು ವೀರ್ಯ ನಳಿಕೆ ಉತ್ಪಾದನಾ ಕೇಂದ್ರಗಳು, ಪಶು ಆಹಾರ/ ಔಷಧಿ ತಯಾರಿಕಾ ಘಟಕಗಳನ್ನು ಅಗತ್ಯ ಸೇವೆಗಳೆಂದು ಪರಿಗಣಿಸಲಾಗಿದೆ.

ಕೆಲವೊಂದು ಜಿಲ್ಲೆಗಳಲ್ಲಿ ಕೋರೋನಾ / ಕೋಳಿ ಜ್ವರವಿರುವ ಶಂಕೆ ವ್ಯಕ್ತಪಡಿಸಿ, ಮೊಟ್ಟೆ / ಕೋಳಿ/ ಕೋಳಿ ಮಾಂಸ ಮಾರಾಟವನ್ನು ನಿರ್ಬಂಧಿಸಲಾಗಿರುತ್ತದೆ ಹಾಗೂ ಅಂಗಡಿಗಳನ್ನು ಮುಚ್ಚಿಸಲಾಗಿರುತ್ತದೆ.

ಸಾರ್ವಜನಿಕರಿಗೆ ಕೋವಿಡ್–19 ರ ಲಾಕ್‌ಡೌನ್ ಅವಧಿಯಲ್ಲಿ ಪೌಷ್ಠಿಕ ಆಹಾರವನ್ನು ಒದಗಿಸುವ ಮೂಲಕ ಆಹಾರ ಭದ್ರತೆಯನ್ನು ನೀಡುವುದು ಅತ್ಯವಶ್ಯಕವಾಗಿರುತ್ತದೆ. ಆದ್ದರಿಂದ ಕೋಳಿ, ಕೋಳಿಮೊಟ್ಟೆ, ಕುರಿ/ ಮೇಕೆ/ ಹಂದಿ ಮಾಂಸ, ಮೀನು, ಹಾಲು ಮತ್ತು ಪಶು / ಕೋಳಿಆಹಾರ, ಉತ್ಪಾದನೆ / ಸಾಗಾಣಿಕೆ / ಮಾರಾಟಕ್ಕೆ ಯಾವುದೇ ರೀತಿಯ ವ್ಯತ್ಯಯವಾಗದ ರೀತಿಯಲ್ಲಿ ಕ್ರಮವಹಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಮೇಲ್ಕಂಡ ಎಲ್ಲ ಆಹಾರ ಪದಾರ್ಥಗಳನ್ನು ಸಾರ್ವಜನಿಕರಿಗೆ ಲಭ್ಯವಾಗಿಸಲು ಸಂಬಂಧಿಸಿದ ಮಾರಾಟ ಮಳಿಗೆಗಳನ್ನು ಮತ್ತು ಉತ್ಪಾದನಾ ಕೇಂದ್ರಗಳನ್ನು ತೆರೆದಿರುವಂತೆ ಹಾಗೂ ಜಾನುವಾರುಗಳಿಗೆ ಆಹಾರದ ಸಮಸ್ಯೆ ಉಂಟಾಗದ ರೀತಿಯಲ್ಲಿ ಸೂಕ್ತ ವ್ಯವಸ್ಥೆಯನ್ನು ಮಾಡಲು ಸೂಚಿಸಿದೆ.

(ಎ.ಬಿ.ಇಬ್ರಾಹಿಂ)
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:–

1. ಆಯುಕ್ತರು, ಬಿಬಿಎಂಪಿ. ಬೆಂಗಳೂರು.
2. ಎಲ್ಲಾ ಜಿಲ್ಲಾಧಿಕಾರಿಗಳು.

Karnataka Government Secretariat, R.No. 404, 4th Floor, Vikasa Soudha, Dr. B.R. Ambedkar Veedhi, Bengaluru-01
ಕರ್ನಾಟಕ ಸರ್ಕಾರದ ಸಚಿವಾಲಯ, 4ನೇ ಮಹಡಿ, ವಿಕಾಸಸೌಧ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು–560 001, ದೂರವಾಣಿ: 22353977, 22034109 (Office), 22253734 (Fax), e-mail: prsahf@gmail.com

Scanned by CamScanner